**ಸಾಕ್ಷಿಯನ್ನು ದಿಃ *27/07/2023* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಪಿಎಂಆರ್ ವಕೀಲರಿಂದ ಪ್ರತಿವಾದಿ ನಂ.9 ಎ ಪರವಾಗಿ.***

ನಾನು ಯಾವ ಇಸ್ವಿಯಲ್ಲಿ ಹುಟ್ಟಿರುತ್ತೇನೆ ಎಂದು ನನಗೆ ನೆನಪಿಲ್ಲ. ನಮ್ಮ ಮನೆ ಟೋಲನಾಕಾ ಹತ್ತಿರ ಇರುತ್ತದೆ. ನನ್ನ ಪ್ರಮಾಣಪತ್ರಕ್ಕೆ ಮಾಹಿತಿ ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರಮಾಣಪತ್ರದಲ್ಲಿ ಚಿಕ್ಕಮಲ್ಲಿಗವಾಡದಲ್ಲಿರುತ್ತೇನೆ ಎಂದು ಬರೆಸಿರುವುದು ನಿಜವಿರುತ್ತದೆ. ನನ್ನ ಕುಟುಂಬವೆಲ್ಲ ಚಿಕ್ಕಮಲ್ಲಿಗವಾಡದಲ್ಲಿರುತ್ತದೆ. ನನ್ನ ಪ್ರಮಾಣಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯರ ಪರಿಚಯವಿರುತ್ತದೆ ಎಂದು ಬರೆಸಿದ್ದು ನಿಜವಿರುತ್ತದೆ. ಅವರ ಪರಿಚಯವಿರುತ್ತದೆ. ಸದರಿ ದಾವೆಯಲ್ಲಿ ಎಷ್ಟು ಜನ ಪ್ರತಿವಾದಿಯರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾದಾಸ್ತಿಗಳು ಎಲ್ಲಿ ಇರುತ್ತವೆ ಎಂದು ನನಗೆ ಗೊತ್ತು, ಆದರೆ ಅವುಗಳ ನಂಬರಗಳನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಕೇಸಿನ ಕುರಿತು ಮಾಹಿತಿ ನನಗೆ ನ್ಯಾಯಾಲಯದಿಂದ ನೋಟೀಸು ಬಂದ ಮೇಲೆ ಗೊತ್ತಾಯಿತು, ನಾನು ವಕೀಲರಿಗೆ ಎಲ್ಲ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ನುಡಿಯಲು ಬರಬೇಕೆಂದು ವಕೀಲರು ನನಗೆ ಹೇಳಿರುತ್ತಾರೆ.

ಸಾಕ್ಷಿದಾರರಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳು ರೇಗೆ ಅವರ ಮನೆತನಕ್ಕೆ ಸಂಬಂಧಿಸಿದ್ದು ಎಂದು ಸಾಕ್ಷಿದಾರರು ಒಪ್ಪಿಕೊಂಡಿರುತ್ತಾರೆ. ಒಂದನೇ ಮಹಡಿಯಲ್ಲಿ ಖಾನಾವಳಿ ಇರುವುದನ್ನು ಸಹ ಒಪ್ಪಿಕೊಂಡಿರುವ ಕಾರಣ ಎರಡು ಛಾಯಾಚಿತ್ರಗಳನ್ನು ಒಟ್ಟಾಗಿ ***ನಿ.ಡಿ.18*** ಎಂದು ಗುರುತಿಸಲಾಯಿತು. ಖಾನಾವಳಿಯನ್ನು ಮಠಪತಿ ಎನ್ನುವವರು ನಡೆಸುತ್ತಾರೆ ಎಂದರೆ ಸಾಕ್ಷಿದಾರರು ದೀಪಕ ರೇಗೆರವರು ಭಾಗಸ್ವಾಮಿಯರು (partnership) ಇರುತ್ತಾರೆ ಎಂದು ಹೇಳುತ್ತಾರೆ. ಈ ವಿಷಯ ನನಗೆ ಯಾರು ಹೇಳಿರುವುದಿಲ್ಲ. ಸದರಿ ಮಠಪತಿರವರು ಎಷ್ಟು ಬಾಡಿಗೆ ಕೊಡುತ್ತಾರೆ ಎಂದು ನನಗೆ ಗೊತ್ತಿಲ್ಲ.

ಜಗದೀಶ ರೇಗೆರವರು ತೀರಿಕೊಂಡಿರುತ್ತಾರೆ, ಆದರೆ ದಿನಾಂಕ, ಇಸ್ವಿ ನನಗೆ ಹೇಳಲು ಬರುವುದಿಲ್ಲ. ನನ್ನ ಹೂವಿನ ಅಂಗಡಿ ದೀಪಕ ರೇಗೆರವರ ಅಂಗಡಿಯ ಕಟ್ಟೆಗೆ ಹತ್ತಿಕೊಂಡು ಇರುತ್ತದೆ. ಸದರಿ ದಾವೆಯಲ್ಲಿ ನಡೆದಿರುವಂತ ವಿಷಯ ಸಂಗತಿಗಳ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

ಕಳೆದ 16-17 ವರ್ಷಗಳಿಂದ ಅಂಗಡಿಗಳ ಬಾಡಿಗೆ ಜಗದೀಶ ರೇಗೆರವರು ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿದಾರರು ದೀಪಕ ರೇಗೆರವರ ತಂದೆಯ ಕಾಲದಿಂದ ಸದರಿಯವರೇ ಬಾಡಿಗೆ ವಸೂಲಿ ಮಾಡುತ್ತಾರೆ ಎಂದು ಹೇಳುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಅವರು ಬಾಡಿಗೆಯನ್ನು ವಸೂಲಿ ಮಾಡುತ್ತಿದ್ದರು ಎನ್ನುವ ಸಂಗತಿ ನನಗೆ ಗೊತ್ತಿಲ್ಲ, ಬಾಡಿಗೆ ಪಡೆದುಕೊಳ್ಳುವುದು ಮಾತ್ರ ಗೊತ್ತು. ಪ್ರಸ್ತುತ ಅವರ ಪತ್ನಿ ಸಹ ನ್ಯಾಯಾಲಯದ ಆದೇಶದ ಪ್ರಕಾರ ಅವರು ಬಾಡಿಗೆಯನ್ನು ವಸೂಲಿ ಮಾಡುತ್ತಿದ್ದಾರೆ ಎನ್ನುವ ಸಂಗತಿ ನನಗೆ ಗೊತ್ತಿಲ್ಲ.

ಪಿತ್ರಾರ್ಜಿತ ಆಸ್ತಿ ಏನೂ ಅಂದರೆ ಒಟ್ಟು ಕೂಡಿ ಆಸ್ತಿ ಎಂದು ಹೇಳುತ್ತಾರೆ. ದಾಖಲೆಗಳನ್ನು ನೋಡಿಲ್ಲ, ಆದರೆ ಆಸ್ತಿಗಳನ್ನು ನೋಡಿದ್ದೇನೆ.ಪಿತ್ರಾರ್ಜಿತ ಆಸ್ತಿ ಎಂದು ನನಗೆ ಯಾರು ಹೇಳಿದ್ದಾರೆ ಎಂದರೆ ನಾನು ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೇವು, ಆದ್ದರಿಂದ ಮನೆಯ ಹಿರಿಯರು ಹಾಗೇ ಹೇಳಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಅಜ್ಜಿ ಸಹ ಅಲ್ಲಿ ಕೆಲಸ ಮಾಡುತ್ತಿದ್ದರು ಅವರೇ ಹೇಳಿರುತ್ತಾರೆ. ನನ್ನ ಅಜ್ಜಿ ಕಾಲದಿಂದಲೂ ನಾವು ಕೆಲಸ ಮಾಡದೇ ಇದ್ದರೂ ಸಹ ಕೆಲಸ ಮಾಡುತ್ತಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರೇಗೆರವರ ಮನೆ ಟೋಲನಾಕಾ ಮೇಲುಗಡೆಯಿರುವ ರಸ್ತೆಗೆ ಇರುತ್ತದೆ. ಅಲ್ಲಿ ಎಷ್ಟು ಜನ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಮನೆಯಲ್ಲಿ 4-5 ದನಗಳು ಇದ್ದವು. ನಾನು ಅಲ್ಲಿ ಕೆಲಸ ಮಾಡದೇ ಇರುವ ಕಾರಣ ಸದರಿ ಮನೆತನದ ಹಸುಗಳ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದೀಪಕರವರು ನನಗೆ ಈ ರೀತಿ ಸಾಕ್ಷ್ಯ ನುಡಿಯಲು ಹೇಳಿದಕ್ಕೆ ನಾನು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.